ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ-

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ಕ್ಲಿನಿಕಲ್ ನೋಟ್ ಅನ್ನು ನಿಪಿ-10 ಎಂದು, ಇತ್ತೀಚಿನ ಒಂದು ಎಕ್ಸರೇ ಅನ್ನು ನಿಪಿ-11 ಎಂದು ಗುರುತಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

ಅರ್ಜಿದಾರರ ಅಪಘಾತವಾದ ನಂತರ ನನ್ನ ಆಸ್ಪತ್ರೆಗೆ ಬಂದಿರುತ್ತಾರಾ ಎಂದರೆ ಸಾಕ್ಷಿ ನಾನು ಯಾವುದೇ ಚಿಕಿತ್ಸೆ ನೀಡಿರುವುದಿಲ್ಲ. ಅಪಘಾತ ಹೇಗೆ ಆಗಿದೆ ಎಂದು ನನಗೆ ಗೊತ್ತಿಲ್ಲ. ಎಂ.ಎಲ್.ಸಿ ಅನ್ನು ನಾನು ಪರಿಶೀಲಿಸಿಲ್ಲ. ಅರ್ಜಿದಾರರಿಗೆ ಚಿಕಿತ್ಸೆ ನೀಡಿರುವ ವೈದ್ಯರು ನನ್ನ ಸಲಹೆ ಪಡೆದಿಲ್ಲ. ನಾನು ಅರ್ಜಿದಾರರ ಅಂಗ ನ್ಯೂನ್ಯತೆ ಪತ್ರವನ್ನು ನೀಡುವ ಉದ್ದೇಶದಿಂದ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಹೇಗೆ ಅಪಘಾತವಾಗಿ ಮತ್ತು ಅವರಿಗೆ ಚಿಕಿತ್ಸೆ ನೀಡದೇ ಇರುವುದರಿಂದ ಅವರಿಗೆ ಅಂಗ ನ್ಯೂನ್ಯತೆ ಪತ್ರವನ್ನು ನೀಡಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

ಅರ್ಜಿದಾರರಿಗೆ ಉಂಟಾಗಿದ್ದ ಮೂಳೆ ಮುರಿತ ಕೂಡಿಕೊಂಡಿದೆ ಎಂದರೆ ಸರಿ. ಅರ್ಜಿದಾರರಿಗೆ 37 ವರ್ಷ ವಯಸ್ಸಾಗಿದೆ ಎಂಬ ವಿಚಾರವನ್ನು ನಾನು

ಆಧಾರ ಕಾರ್ಡ್ ನೋಡಿ ತಿಳಿದುಕೊಂಡಿರುತ್ತೇನೆ. ಅರ್ಜದಾರರಿಗೆ ಮೂಳೆ ಮುರಿತ ಕೂಡಿಕೊಂಡಿರುವುದರಿಂದ ನಾನು ಹೆಚ್ಚು ಅಂಗ ನ್ಯೂನ್ಯತೆಯ ಅಂಶವನ್ನು ಚಲನವಲನಕ್ಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಮೂಳೆ ಮುರಿತ ಕೂಡಿಕೊಂಡಿರುವುದರಿಂದ ಪೂರ್ಣ ದೇಹಕ್ಕೆ 2 ರಿಂದ 3 ಅಂಶದಷ್ಟು ಅಂಗ ನ್ಯೂನ್ಯತೆ ಬರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ಶಸ್ತ್ರ ಚಿಕಿತ್ಸೆ ಆಗಿರುವುದಿಲ್ಲ. ಅರ್ಜಿದಾರರಿಗೆ ಮುಂದುವರೆದ ಚಿಕಿತ್ಸೆ ಅಗತ್ಯವಿರುವುದಿಲ್ಲ. ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಹಣ ಸಿಗಲಿ ಎಂದು ಹೆಚ್ಚು ಅಂಗ ನ್ಯೂನ್ಯತೆಯ ಅಂಶವನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು